## ಭವಿಷ್ಯದ ಯೋಜನೆಗಳು

ರಾಜ್ಯದ ಉನ್ನತ ಶಿಕ್ಷಣ ಕ್ಷೇತ್ರವನ್ನು ಬಲಪಡಿಸಿ ವಿಶ್ವಮಟ್ಟಕ್ಕೇರಿಸಲು ರಾಜ್ಯ ಸರ್ಕಾರವು ಸಂಸ್ಥೆಯ ಸೇವೆಯನ್ನು ಬಳಸಿಕೊಳ್ಳುತ್ತದೆ ಎಂಬ ಅಪಾರ ವಿಶ್ವಾಸವನ್ನು ವೇದಿಕೆಯು ಹೊಂದಿದೆ. ಸರಣಿಯಲ್ಲಿ ವಿಚಾರ ಸಂಕಿರಣಗಳನ್ನು, ಕಾರ್ಯಾಗಾರಗಳನ್ನು, ತರಬೇತಿ ಕಾರ್ಯಕ್ರಮಗಳನ್ನು ಮತ್ತು ವಿಸ್ತರಣಾ ಚಟುವಟಿಕೆಗಳನ್ನು ಹಮ್ಮಿಕೊಂಡು ಶಿಕ್ಷಣ ಸಂಸ್ಥೆಗಳಿಗೆ, ವಿಶೇಷವಾಗಿ ಶಿಕ್ಷಕರಿಗೆ ಮತ್ತು ಸಂಶೋಧಕರಿಗೆ ನೆರವಾಗಲು ಈ ವೇದಿಕೆಯು ಯೋಜನೆಗಳನ್ನು ಹಾಕಿಕೊಂಡಿದೆ. ಜೊತೆಜೊತೆಗೆ ವೇದಿಕೆಯು ಉನ್ನತ ಶಿಕ್ಷಣ ಕೇಂದ್ರಗಳಾಗಲು ಹಂಬಲಿಸುವ ಶಿಕ್ಷಣ ಸಂಸ್ಥೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಮೌಲ್ಯಮಾಪನಾ ಕ್ಷೇತ್ರದಲ್ಲಿ ಸಹಾಯಹಸ್ತ ಚಾಚಲು ಸಿದ್ಧವಾಗಿದೆ. ಸಾರ್ವಜನಿಕ ಮತ್ತು ಖಾಸಗೀ ಶಿಕ್ಷಣ ಸಂಸ್ಥೆಗಳು ತಮ್ಮ ಸಿಬ್ಬಂದಿಯನ್ನು ಸಮರ್ಥರನ್ನಾಗಿಸಿ ಶೈಕ್ಷಣಿಕ ಮೌಲ್ಯವನ್ನು ಹೆಚ್ಚಿಸುವಲ್ಲಿ ವೇದಿಕೆಯ ನೆರವು ಪಡೆದುಕೊಳ್ಳಬಹುದಾಗಿದೆ.




**ಸಂಪರ್ಕ ವಿಳಾಸ**

**ಕಾರ್ಯದರ್ಶಿ,**

**ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಶ್ರಾಂತ ಕುಲಪತಿಗಳ ವೇದಿಕೆ**

1, ಲಾ ಕಾಲೇಜು (ಹಳೆಯ ಕಟ್ಟಡ), ಪ್ಯಾಲೇಸ್ ರಸ್ತೆ,
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು
ಪ್ರಧಾನ ಕಛೇರಿಯ ಹತ್ತಿರ, ಬೆಂಗಳೂರು-560009

ದೂರವಾಣಿ : 080 – 22341171

ಮಿಂಚಂಚೆ : secretaryfvck@gmail.com


**ಸೂಚನೆ:** ವೇದಿಕೆಯ ಕಛೇರಿಯು ಬೆಂಗಳೂರು ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜು (ಹಿಂದಿನ ಲಾ ಕಾಲೇಜು ಕಟ್ಟಡದ) ಆವರಣದಲ್ಲಿದೆ.




ನಹಿ ಜ್ಞಾನೇನ ಸದೃಶಂ

FVCK

# ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಶ್ರಾಂತ ಕುಲಪತಿಗಳ ವೇದಿಕೆ, ಬೆಂಗಳೂರು

'ಸಮಾಜಕ್ಕೆ ನಿನ್ನ ಋಣವನ್ನು ತೀರಿಸು' ಎಂಬ ಧ್ಯೇಯವಾಕ್ಯದಿಂದ ಪ್ರೇರೇಪಿತವಾಗಿ ವಿಶ್ರಾಂತಿ ಬಯಸದ **ವಿಶ್ರಾಂತ ಕುಲಪತಿಗಳ ವೇದಿಕೆಯು** ಸಾಮಾಜಿಕ ಕಳಕಳಿಯಿಂದ ಉನ್ನತ ಶಿಕ್ಷಣಕ್ಕೆ ಸುಗಮಹಾದಿ ಕಲ್ಪಿಸುವುದರ ಜೊತೆಗೆ ಅದರ ಉತ್ಕೃಷ್ಟತೆಗಾಗಿ ದುಡಿಯಲು ಕಂಕಣಬದ್ಧವಾಗಿದೆ.



## ಉಗಮ ಮತ್ತು ಉದ್ದೇಶ

"ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಶ್ರಾಂತ ಕುಲಪತಿಗಳ ವೇದಿಕೆ"ಯು ದಿನಾಂಕ 16-05-2008ರಂದು ಒಂದು ನೋಂದಾಯಿತ ಸಂಸ್ಥೆಯಾಗಿ ಸ್ಥಾಪಿಸಲ್ಪಟ್ಟಿತು. ಭಾರತದಲ್ಲೇ ಪ್ರಪ್ರಥಮ ಬಾರಿಗೆ ದೂರದರ್ಶಿತ್ವವುಳ್ಳ ಹಲವಾರು ನಿವೃತ್ತ ಕುಲಪತಿಗಳ ಪ್ರಯತ್ನದಿಂದ ಉಗಮಗೊಂಡ ವೇದಿಕೆ ಇದಾಗಿದೆ. ಈ ವೇದಿಕೆಯ ಪ್ರಮುಖ ಉದ್ದೇಶವೆಂದರೆ, ಉನ್ನತ ಶಿಕ್ಷಣಕ್ಕಾಗಿ ಹಂಬಲಿಸುವ ಯುವಜನತೆಗೆ ಸೂಕ್ತ ಮಾರ್ಗದರ್ಶನ ನೀಡುವುದರ ಜೊತೆಗೆ ಉನ್ನತ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಸಲಹೆ ಸೂಚನೆಗಳನ್ನು ನೀಡುವುದಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಒಂದು ಮಂತ್ರಾಲೋಚನಾ ವೇದಿಕೆಯಾಗಿ ಈ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಈ ವೇದಿಕೆಯು ನಾಡಿನ ಜನತೆಗೆ ಉನ್ನತ ಶಿಕ್ಷಣದ ಪ್ರಾಮುಖ್ಯತೆಯ ಸೂಕ್ಷ್ಮಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಶಿಕ್ಷಣ ಸಂಸ್ಥೆಗಳು ನೀಡುತ್ತಿರುವ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳು ವಿಶ್ವಮಟ್ಟಕ್ಕೆ ಸರಿಸಾಟಿಯಾಗಿ ನಿಲ್ಲಬೇಕಾದ ಅವಶ್ಯಕತೆಯನ್ನು ಮನವರಿಕೆ ಮಾಡಿಕೊಡುವ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಇದಲ್ಲದೆ, ಮಾನವ ಸಂಪನ್ಮೂಲದ ಅಭಿವೃದ್ಧಿಯಲ್ಲಿ, ವಿಶೇಷವಾಗಿ



ದೇಶದ ಯುವಜನತೆ ಸಮರ್ಪಕ ಜ್ಞಾನ ಮತ್ತು ಕೌಶಲ್ಯಗಳಿಂದ ಸಬಲೀಕರಣಗೊಂಡು ರಾಷ್ಟ್ರದ ಜವಾಬ್ದಾರಿಯುತ ಪ್ರಜೆಗಳಾಗಿ ರೂಪುಗೊಳ್ಳುವಂತೆ ಅವರನ್ನು ಪ್ರೇರೇಪಿಸುವ ಇಚ್ಛೆ ಈ ವೇದಿಕೆಗಿದೆ. ಯುವಜನತೆಯು ಸೃಜನಶೀಲ ವ್ಯಕ್ತಿಗಳಾಗಿ ಸ್ವಯಂಪ್ರೇರಣೆಯಿಂದ ರಾಷ್ಟ್ರದ ಆರ್ಥಿಕಾಭಿವೃದ್ಧಿ, ಸಾಮಾಜಿಕ ಮೌಲ್ಯಗಳು ಮತ್ತು ನಮ್ಮದೇ ಆದ ಸಂಸ್ಕೃತಿಗಳಿಗೆ ಸಮರ್ಪಿತರಾಗಿ ಸಮಾನತೆಯನ್ನು ಕಾಯ್ದುಕೊಳ್ಳುವಂತೆ ಅವರನ್ನು ಬೆಳೆಸುವ ನಿಟ್ಟಿನಲ್ಲಿ ವೇದಿಕೆಯು ಪ್ರಯತ್ನಿಸುತ್ತದೆ.

## ಸದಸ್ಯತ್ವ

ಕರ್ನಾಟಕ ರಾಜ್ಯದ ಯಾವುದೇ ಸರ್ಕಾರಿ ವಿಶ್ವವಿದ್ಯಾನಿಲಯದ ನಿವೃತ್ತ ಕುಲಪತಿಗಳು ಸದಸ್ಯತ್ವಕ್ಕೆ ಅರ್ಹರು. ಸದಸ್ಯರಾಗುವವರು ಸಹಜವಾಗಿ ತಮ್ಮದೇ ಆದ ಶೈಕ್ಷಣಿಕ ಕ್ಷೇತ್ರಗಳಲ್ಲಿ ಮುಂಚೂಣಿಯ ನಾಯಕರಾಗಿ ದೀರ್ಘ ಅನುಭವ ಹೊಂದಿದ ವಿದ್ಯಾಸಂಪನ್ನರಾಗಿರುತ್ತಾರೆ. ವಿವಿಧ ಶೈಕ್ಷಣಿಕ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಅಂದರೆ - ಕೃಷಿ, ಜೀವ ವಿಜ್ಞಾನ, ಭೌತಶಾಸ್ತ್ರ, ಸಮಾಜ ವಿಜ್ಞಾನ, ಮಾನವ ವಿಜ್ಞಾನ, ನ್ಯಾಯಶಾಸ್ತ್ರ, ತಾಂತ್ರಿಕ ವಿಜ್ಞಾನ, ವೈದ್ಯಕೀಯ ವಿಜ್ಞಾನ ಹಾಗೂ ದೂರ ಸಂಪರ್ಕ ಶಿಕ್ಷಣ ಕ್ಷೇತ್ರಗಳಲ್ಲಿ ಪರಿಣಿತಿ ಪಡೆದ ಮೇಧಾವಿಗಳು ಸದಸ್ಯರಾಗುವ ಮೂಲಕ ವೇದಿಕೆಯು ತಾನೇ ತಾನಾಗಿ ಸಮರ್ಥ ಪ್ರಾಜ್ಞರ ಪ್ರಾಂಗಣವಾಗುವುದರಲ್ಲಿ ಎರಡು ಮಾತಿಲ್ಲ. ಅವರುಗಳ ಅಭಿಜ್ಞಾನ, ಅನುಭವ ಮತ್ತು ಸಾಮಾಜಿಕ ಕಳಕಳಿಗಳು ಒಕ್ಕೂಟದ ಅಗತ್ಯ ಸಂಪನ್ಮೂಲಗಳಾಗಿವೆ. ಈ ಸದಸ್ಯತ್ವದ ಜೊತೆಗೇ, ರಾಜ್ಯದವರಾಗಿದ್ದು ಇತರೇ ರಾಜ್ಯಗಳಲ್ಲಿನ ವಿಶ್ವವಿದ್ಯಾಲಯಗಳ ನಿವೃತ್ತ ಕುಲಪತಿಗಳು ಈ ವೇದಿಕೆಯ ಸದಸ್ಯರಾಗಲು ಅವಕಾಶವಿದೆ.

## ಚಟುವಟಿಕೆಗಳು

ವೇದಿಕೆಯು ಪ್ರಸ್ತುತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ, ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಲು ವಿಚಾರ ಸಂಕಿರಣಗಳು, ಸಮ್ಮೇಳನಗಳು, ಕಾರ್ಯಾಗಾರಗಳು ಹಾಗೂ ಸಂವಾದಗಳನ್ನು ಫಲಾನುಭವಿಗಳ ಉಪಸ್ಥಿತಿಯಲ್ಲಿ ಏರ್ಪಡಿಸುತ್ತಿದೆ. ಉದಾಹರಣೆಗೆ, ಸ್ವಾಯತ್ತ ಶಿಕ್ಷಣ ಸಂಸ್ಥೆಗಳು ಮತ್ತು ಖಾಸಗೀ ವಿಶ್ವವಿದ್ಯಾನಿಲಯಗಳ ಕಾರ್ಯವೈಖರಿ, ಅನುವಂಶಿಕತೆ ಮಾರ್ಪಡಿಸಿದ/ವಂಶಾಂತರಿ ಬೆಳೆ/ತಳಿಗಳ ಪ್ರಾಮುಖ್ಯತೆ ಮತ್ತು ಆಹಾರ ವಸ್ತುಗಳ ಮೌಲ್ಯವರ್ಧನೆ ಬಗ್ಗೆ ನಡೆಸಿದ ವಿಚಾರಸಂಕಿರಣಗಳು ಜನಪ್ರಿಯವಾಗಿ ಸ್ವೀಕೃತಗೊಂಡಿವೆ. ವೇದಿಕೆಯು ಸಂಶೋಧನಾ ಯೋಜನೆಗಳನ್ನೂ ಸಹಾ ಕೈಗೆತ್ತಿಕೊಂಡಿದೆ. ಮೈಸೂರು ವಿಶ್ವವಿದ್ಯಾನಿಲಯವು ಧನಸಹಾಯ ಮಾಡಿರುವ ಉನ್ನತ ಶಿಕ್ಷಣದ ಅಭಿವೃದ್ಧಿಯ ಬಗೆಗಿನ ಯೋಜನೆಯೊಂದು ಪ್ರಸ್ತುತ ಪ್ರಗತಿಯಲ್ಲಿದೆ. ಕರ್ನಾಟಕ ಸರ್ಕಾರವು ಪ್ರಮುಖ ಬೆಳೆಗಳ ಬೀಜೋತ್ಪಾದನಾ ಚಟುವಟಿಕೆಗಳಿಗಾಗಿ ಧನಸಹಾಯ ನೀಡಿದೆ. ವೇದಿಕೆಯು ನಂಬಿರುವ **"ನಿನ್ನ ಸಮಾಜದ ಋಣವನ್ನು ತೀರಿಸು"** ಎಂಬ ಘೋಷಿತ ಧ್ಯೇಯಕ್ಕನುಗುಣವಾಗಿ ಶಿಕ್ಷಣ ಕ್ಷೇತ್ರದ ಸುಧಾರಣೆಗಾಗಿ ಸರ್ಕಾರಿ ಮತ್ತು ಖಾಸಗೀ ಕ್ಷೇತ್ರಗಳೆರಡರಲ್ಲೂ ಸರ್ಕಾರದ ಕೈಗಳನ್ನು ಈ ವೇದಿಕೆಯು ಬಲಪಡಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದೆ.

